www.ecourtsindia.com



ಡಿ ಡಬ್ಲ್ಯೂಃ 1

ಇಂದು ದಿನಾಂಕ 28-06-2025 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಪಾಟೀ ಸವಾಲುಃ ಅರ್ಜಿದಾರರ ಪರ ವಕೀಲರಿಂದಃ**

ಪ್ರಸುತ್ತ ಅರ್ಜಿಯಲ್ಲಿ 1 ನೇ ಅರ್ಜಿದಾರರು ನನ್ನ ತಾಯಿ. 2 ರಿಂದ 8 ಅರ್ಜಿದಾರರು ನನ್ನ ಸಹೋದರಿಯರು. ಓ ಎಸ್ ನಂಬರ್ 277/2008 ಮತ್ತು ಎಫ್ ಡಿ ಪಿ ನಂಬರ್ 9/2012 ನೇ ದಾವೆಯನ್ನು ನಡೆಸಲು ಎಸ್ ಜಿ ಹಿರೇಮಠ ಎಂಬ ವಕೀಲರಿಗೆ ಅರ್ಜಿದಾರರು ವಕಲತ್ತನ್ನು ನೀಡಿದ್ದರು. ಸದರಿ ವಕೀಲರು ಧಾರವಾಡದಿಂದ ಹಾಜರಾಗುತ್ತಿದ್ದರು ಮತ್ತು ಹಿರಿಯ ವಕೀಲರಾಗಿದ್ದರು. ನನ್ನ ತಾಯಿಗೆ ವಯಸ್ಸು ಆಗಿದ್ದು ಮತ್ತು ಅನಾರೋಗ್ಯದಿಂದ ಬಳಲುತ್ತಿದ್ದರು.2021 ರಲ್ಲಿ ದೇಶದಲ್ಲಿ ಕೋವಿಡ್ ಇದ್ದ ಕಾರಣ ಯರು ಕೂಡ ಬೇರೆ ಕಡೆ ಸಂಚಾರಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. 2 ನೇ ಅರ್ಜಿದಾರರು ಗದಗನಲ್ಲಿ ವಾಸವಾಗಿರುತ್ತಾರೆ. 3, 4 ಮತ್ತು 5 ನೇ ಅರ್ಜಿದಾರರು ಹುಬ್ಬಳ್ಳಿಯಲ್ಲಿ ವಾಸವಾಗಿರುತ್ತಾರೆ ಎಂದರೆ 5 ನೇ ಅರ್ಜಿದಾರರು ರಾಣೇಬೆನ್ನೂರಿನಲ್ಲಿ ವಾಸವಾಗಿರುತ್ತಾರ. 7 ಮತ್ತು 8 ನೇ ಅರ್ಜಿದಾರರು ರಾಣೇಬೆನ್ನೂರಿನಲ್ಲಿ ವಾಸವಾಗಿರುತ್ತಾರೆ. ನನ್ನ ತಾಯಿ ಅನಾರೋಗ್ಯದಲ್ಲಿ ಇರುವ ಕಾರಣ 8 ನೇ ಅರ್ಜಿದಾರರು ನನ್ನ ತಾಯಿಯನ್ನ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. 2021 ನೇ ಇಸವಿಯಲ್ಲಿ ನನನ ತಾಯಿ ಅನಾರೋಗ್ಯದಿಂದ ಬಳಲುತ್ತಿದ್ದ ಕಾರಣ ನ್ಯಾಯಾಲಯಕ್ಕೆ ಹಾಜರಾಗಿರಿರುವುದಿಲ್ಲ ಎಂದರೆ ಸರಿಯಲ್ಲ. ಸದರಿಯವರನ್ನ ಪ್ರತಿನಿಧಿಸುತ್ತಿದ್ದ ವಕೀಲರು ಸಹ ಹಿರಿಯರಾಗಿರುವ ಕಾರಣ ನ್ಯಾಯಾಲಯಕ್ಕೆ ಹಾಜರಾಗಿರುವುದಿಲ್ಲ ಎಂದರೆ ಸರಿಯಲ್ಲ . ಉದ್ದೇಶ ಪೂರ್ವಕ್ಕೆವಾಗಿ ಅರ್ಜಿದಾರರು ನ್ಯಾಯಾಲಯಕ್ಕೆ ಹಾಜರಾಗಿರುವುದಿಲ್ಲ ಎಂದರೆ ಸರಿಯಲ್ಲ. 2021 ರಲ್ಲಿ ಕೋಲವಿಡ್ ಇದ್ದ ಕಾರಣ ಮತ್ತು ವಕೀಲರು ಹಿರಿಯರಾಗಿದ್ದ ಕಾರಣ ಬಸ್ಸಿನ ಸೌಕರ್ಯ ಇಲ್ಲದ ಕಾರಣ ನ್ಯಾಯಾಲಯಕ್ಕೆ ಹಾಜರಾಗಿರುವುದಿಲ್ಲ ಎಂದರೆ ಸರಿಯಲ್ಲ.

This is a True Copy of the Court Records Online. Authenticated @ districts.ecourtsindia.com/cnr/KAHV520018562021/truecopy/order-3.pdf

2. ನನ್ನ ತಾಯಿಗೆ ಆರೋಗ್ಯ ಸರಿ ಇಲ್ಲದ ಕಾರಣ ಅವರನ್ನು ಆಸ್ಪತ್ರೆಗೆ ಕರೆದುಕೊಂಡು 8 ನೇ ಅರ್ಜಿದಾರರು ಹೋಗಿದ್ದ ಕಾರಣ ನ್ಯಾಯಾಲಯಕ್ಕೆ ಹಾಜರಾಗಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

ತೆ.ನ್ಯಾ.ದಲ್ಲಿ ಬೆ.ಮಾಡಲಾಯಿತು.

ನನ್ನ ಸಮಕ್ಷಮ

ಸಹಿ/-
2 ನೇ ಹೆಚ್ಚುವರಿ ದಿವಾಣಿ ನ್ಯಾಯಾದೀಶರು
ರಾಣೇಬೆನ್ನೂರು.

ಓ ಹೇ ಕೆ ಸರಿ ಇದೆ.

This is a True Copy of the Court Records Online. Authenticated @ districts.ecourtsindia.com/cnr/KAHV520018562021/truecopy/order-3.pdf

www.ecourtsindia.com